ಶ್ರೀ ವಾಟಾಳ್ ನಾಗರಾಜ್ : ಪೆಟ್ರೋಲ್, ಡೀಸೆಲ್ ಬೆಲೆ ಏರಿಸಿ ಜನಸಾಮಾನ್ಯರ ಬದುಕನ್ನು ಹರಿದು ಚಿಂದಿ ಮಾಡಿರುವ ಸರ್ಕಾರದ ವಿರುದ್ಧ ನಾವೆಲ್ಲರೂ ಸೇರಿ ಪ್ರತಿಭಟಿಸ ಬೇಕೆಂದಿದ್ದೇವೆ. ಆದ ಕಾರಣ, ಕೇಂದ್ರ ಸರ್ಕಾರದ ವಿರುದ್ಧ ಇಲ್ಲಿ ನಿರ್ಣಯವೊಂದನ್ನು ತರಬೇಕೆಂದು ನಾವು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ. ಪೆಟ್ರೋಲ್ ಡೀಸೆಲ್ ಬೆಲೆ ಏರಿಸಿರುವ ಬಗ್ಗೆ ತಾವೇ ಇಲ್ಲಿ ನೇರವಾಗಿ ನಿರ್ಣಯ ಮಂಡಿಸಿದರೆ ಒಳ್ಳೆಯದು.

ಅಧ್ಯಕ್ಷರು : ಆ ಕುರಿತು ಪ್ರಸ್ತಾಪಿಸಲು ಮಧ್ಯಾಹ್ನ ತಮಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಏಕೆಂದರೆ, ಈ ದೇಶದ ಜನತೆ, ಬಡವರು, ಮಧ್ಯಮ ವರ್ಗದವರು, ಜನಸಾಮಾನ್ಯರುಗಳಿಗೆ ಬೆಲೆ ಏರಿಕೆಯಿಂದಾಗಿ ತೀವ್ರ ಹೊರೆಯಾಗಿದೆ. ನಾಳೆ ಬೆಳಗ್ಗೆ ಬಸ್ ದರ ಏರಿಸಿದರೆ...

ಅಧ್ಯಕ್ಷರು : ನಾನು ಮಧ್ಯಾಹ್ನ ತಮಗೆ ಅವಕಾಶ ಮಾಡಿಕೊಡುತ್ತೇನೆ. Let us go to the Bill

ಶ್ರೀ ವಾಟಾಳ್ ನಾಗರಾಜ್ : ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ರವರು ಸಭಾತ್ಯಾಗ ಮಾಡಿದರು)

ಶ್ರೀ ಆರಗಜ್ಞಾನೇಂದ್ರ : ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ವಿರತದ್ಧ ಪ್ರಸ್ತಾಪಿಸುವುದಕ್ಕೆ ತಾವು ಖಂಡಿತವಾಗಿಯೂ ಮಧ್ಯಾಹ್ನ ಅವಕಾಶ ಮಾಡಿಕೊಡಬೇಕು. ಜನಜೀವನದ ಮೇಲೆ ಬಹಳ ದುಷ್ಪರಿಣಾಮವುಂಟಾಗಿದೆ. ಕೇಂದ್ರ ಸರ್ಕಾರದ ವಿರುದ್ಧ ನಿರ್ಣವೊಂದನ್ನು ತರುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಕಮ್ಯುನಿಸ್ಟರು ತಾವು ನೀಡಿರುವ ಬೆಂಬಲವನ್ನು ವಾಪಸ್ಸು ತೆಗೆದುಕೊಳ್ಳುವುದು ಒಳ್ಳೆಯದು. ಶ್ರೀರಾಮರೆಡ್ಡಿಯವರೆ. ಅವರಿಗೆ ಕೊಟ್ಟಿರುವಂತಹ ಬೆಂಬಲವನ್ನು ತಾವು ವಾಪಸ್ಸು ತೆಗೆದುಕೊಳ್ಳಬೇಕು. ಯಾವಾಗಲೂ ಸುಮ್ಮನೆ ಪ್ರತಿಭಟನೆ ಮಾಡುವುದು ಅವರಿಗೆ ಬೆಂಬಲ ಕೊಡುವುದು, ಕುಮ್ಮಕ್ಕು ಕೊಡುವುದನ್ನು ಮಾಡುತ್ತಿದ್ದೀರಿ.

ಶ್ರೀ ಜಿ.ವಿ. ರಾಮರೆಡ್ಡಿ : ಅವರು ಎಕ್ಸೆಸ್ ಡ್ಯೂಟಿ ಮತ್ತು ಟ್ಯಾಕ್ಸ್ ಕಡಿಮೆ ಮಾಡಿದರೆ ಇಲ್ಲಿ ರೆಡ್ಯೂಸ್ ಆಗುತ್ತದೆ. ಬೇರೆ ರಾಜ್ಯಗಳಿಗಿಂತಲೂ ಕರ್ನಾಟಕದಲ್ಲಿ ಜಾಸ್ತಿ ಇದೆ.

ಅಧ್ಯಕ್ಷರು : ತಾವು ಮಧ್ಯಾಹ್ನ ಮಾತನಾಡಿ ಆಗ ಬೇರೆಯವರಿಗೂ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ.